Rotary 2024-25

THE MAGIC OF ROTARY

ಮಿಡ್‌ಟೌನ್ ನ್ಯೂಸ್

# Midtown News

In House Bulletin of Rotary Club Shimoga Mid Town

R.I. President : Rtn. Stephanie A. Urchick
Dist. Governor : Rtn. Dev Anand
Asst. Governor : Rtn. Nagaraj S.R.

President : Rtn. Suresh Kumar D.
Secretary : Rtn. Faheem Hussain

Director : Rtn. Badriprasad T.A.
Editor : Rtn. Meera Nadig
Co-Chairmen : Rtn. Anand I.R.
Members : Rtn. G.N.N. Murthy, Rtn. Faheem Hussain

*We meet on 2nd, 3rd and 4th Thursday at Rotary Mid Town Hall, SHIVAMOGGA-577201*

rotaryshimogamidtown@gmail.com

**Vol. 41** **11 - 7 - 2024** **ISSUE 2**

## New Leadership Month

### ದಿನಾಂಕ 4-7-2024ರ ವಾರದ ಸಭೆಯ ವರದಿ

ದಿನಾಂಕ 4-7-2024ರ ವಾರದ ಸಭೆಯು 2024-25ನೇ ಸಾಲಿನ ಅಧ್ಯಕ್ಷ ಮತ್ತು ಆಡಳಿತ ಮಂಡಳಿಯ ಪದವಿ ಸ್ವೀಕಾರ ಸಮಾರಂಭದ ಸಭೆಯಾಗಿತ್ತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ರೋಟರಿ ಜಿಲ್ಲೆ 3182ರ 2025-26ನೇ ಸಾಲಿಗೆ ನಿಯೋಜಿತರಾಗಿರುವ ಜಿಲ್ಲಾ ಗವರ್ನರ್ ರೊ. ಪಾಲಾಕ್ಷ ಕೆ. ಇವರು ಆಗಮಿಸಿದ್ದರು. ವೇದಿಕೆಯಲ್ಲಿ 2023-24ನೇ ಸಾಲಿನ ಅಧ್ಯಕ್ಷರಾದ ರೊ. ರವೀಂದ್ರಕುಮಾರ್ ಕೆ., ಕಾರ್ಯದರ್ಶಿ ರೊ. ರವೀಂದ್ರ ಬೆಣ್ಣೆಹಳ್ಳಿ, ಆನ್ಸ್ ಅಧ್ಯಕ್ಷೆ ರೊ. ನಿರಂಜನಿ ರವೀಂದ್ರ, ಕಾರ್ಯದರ್ಶಿ




ರೊ. ಗಿರಿಜಾ ರವೀಂದ್ರ, ಅಸಿಸ್ಟೆಂಟ್ ಗವರ್ನರ್ ರೊ. ನಾಗರಾಜ ಎಸ್.ಆರ್ ಈ ಸಾಲಿನ ಅಧ್ಯಕ್ಷರಾದ ರೊ. ಸುರೇಶ್‌ಕುಮಾರ್ ಡಿ, ಕಾರ್ಯದರ್ಶಿ ರೊ. ಫಹೀಮ್ ಹುಸೇನ್ ಉಪಸ್ಥಿತರಿದ್ದರು. ಅಧ್ಯಕ್ಷರಾದ ರೊ. ರವೀಂದ್ರಕುಮಾರ್ ಕೆ. ಇವರು ಸಭೆಗೆ ಎಲ್ಲರನ್ನು ಸ್ವಾಗತಿಸಿ ಚಾಲನೆ ನೀಡಿದರು.

ಆ್ಯನ್ ಸ್ಮಿತಾ ಆನಂದ್‌ರವರ ಪ್ರಾರ್ಥನೆ ಯೊಂದಿಗೆ ಸಭೆ ಪ್ರಾರಂಭವಾಯಿತು. ವೇದಿಕೆಯ ಮೇಲಿದ್ದ ಗಣ್ಯರು ದೀಪವನ್ನು ಬೆಳಗಿಸುವ ಮೂಲಕ ಶುಭಕೋರಿದರು. ನಂತರ ನಿರ್ಗಮಿತ ಅಧ್ಯಕ್ಷರಾದ ರೊ. ರವೀಂದ್ರ ಕುಮಾರ್ ಕೆ. ಇವರು ತಮ್ಮ ಈ ಒಂದು ವರ್ಷ ಅವಧಿಯಲ್ಲಿ ಈ ಕ್ಲಬ್ಬಿನ ಅಧ್ಯಕ್ಷನಾಗಿ ಸೇವೆ ಸಲ್ಲಿಸಿರುವುದು ಸಮಾಧಾನ ತಂದಿದೆ ಎಂದು ತಿಳಿಸಿದರು. ತಮ್ಮ ಅವಧಿಯಲ್ಲಿ ಸಹಕಾರ ನೀಡಿದ ಎಲ್ಲಾ ಸದಸ್ಯರಿಗು ಧನ್ಯವಾದಗಳನ್ನು ಅರ್ಪಿಸಿದರು.

ಪದವಿ ಪ್ರದಾನ ಅಧಿಕಾರಿಗಳಾಗಿ ಆಗಮಿಸಿದ್ದ ರೊ. ಪಾಲಾಕ್ಷ ಕೆ. ಇವರ ಪರಿಚಯವನ್ನು ನಿಯೋಜಿತ ಅಧ್ಯಕ್ಷರಾದ ರೊ. ಹರ್ಷಾ ಕಾಮತ್ ಇವರು ಸಭೆಗೆ ಪರಿಚಯಿಸಿದರು. ಹಾಗೂ ಅಸಿಸ್ಟೆಂಟ್ ಗವರ್ನರ್‌ರಾದ ರೊ. ನಾಗ ರಾಜ ಎಸ್.ಆರ್. ಇವರನ್ನು ರೊ. ಧರಣಿ ದೇವಾಂಗಿ ಹಾಗೂ ಜೋನಲ್ ಲೆಫ್ಟಿನೆಂಟ್ ರೊ. ಮಂಜುಳಾ ರಾಜು ಇವರನ್ನು ರೊ. ವೀಣಾ ಸುರೇಶ್ ಇವರು ಪರಿಚಯ ಮಾಡಿಕೊಟ್ಟರು.

ಈ ಸಾಲಿನ ಅಧ್ಯಕ್ಷರಾದ ರೊ. ಸುರೇಶ್‌ಕುಮಾರ್ ಡಿ. ಇವರ ಪರಿಚಯುವನ್ನು ಪೂರ್ವಾಧ್ಯಕ್ಷರಾದ ರೊ. ಮುರಳಿ ಎಂ. ಇವರು ಮಾಡಿದರು. 2024-25ನೇ ಸಾಲಿನ ಅಧ್ಯಕ್ಷರಾದ ರೊ. ಸುರೇಶ್‌ಕುಮಾರ್

## ವಾರದ ಸಭೆ

ದಿನಾಂಕ : **11-7-2024, ಗುರುವಾರ**
ಸಮಯ : **ಸಂಜೆ 7.30ಕ್ಕೆ**
ವಿಷಯ : **ಕ್ಲಬ್ ಅಫೇರ್ಸ್**

ಡಿ., ಕಾರ್ಯದರ್ಶಿ ರೊ. ಫಹೀಮ್ ಹುಸೇನ್ ಹಾಗೂ ಕಾರ್ಯಕಾರಿ ಮಂಡಳಿಯ ಸದಸ್ಯರಿಗೆ ಮುಖ್ಯ ಅತಿಥಿ ಹಾಗೂ ಪದ ಪ್ರಧಾನ




ಅಧಿಕಾರಿಗಳಾದ ಡಿಜಿಇ ಪಿನ್ ತೊಡಿಸುವ ಮೂಲಕ ಎಲ್ಲರಿಗೂ ಶುಭ ಹಾರೈಸಿದರು. ಹಾಗೂ ಆ್ಯನ್ಸ್ ಕ್ಲಬ್ ಅಧ್ಯಕ್ಷೆಯಾದ ಆ್ಯನ್ ಅನುರಾಧ ಮೂರ್ತಿ, ಕಾರ್ಯದರ್ಶಿ ರೊ. ಉಮಾ ಅಮ ರ್ ಮತ್ತು ಅವರ ಆಡಳಿತ ಮಂಡಳಿಯ ಸದಸ್ಯರುಗಳಿಗೂ ಪುಷ್ಪವನ್ನು ನೀಡಿ ಶುಭ ಕೋರಿದರು.



ಹೊಸದಾಗಿ ಅಧೀಕಾರ ಸ್ವೀಕಾರಮಾಡಿದ ಅಧ್ಯಕ್ಷರೊಂದಿಗೆ ಮುಖ್ಯ ಅತಿಥಿಗಳು ಹಾಗೂ ಇನ್ನಿತರ ಸದಸ್ಯರೊಂದಿಗೆ 2024-25ರ ಸಾಲಿನ ಅಂತರರಾಷ್ಟ್ರೀಯ **"The Magic of Rotary"** ನನ್ನು ಅನಾವರಣ ಗೊಳಿಸಲಾಯಿತು.

ಪದವಿ ಸ್ವೀಕಾರದ ನಂತರ ಅಧ್ಯಕ್ಷರಾದ ರೊ. ಸುರೇಶ್‌ಕುಮಾರ್ ಡಿ. ಇವರು ಒಂದು ವರ್ಷ ಅವರ ಅವಧಿಯಲ್ಲಿ ತಾವು ಕೈಗೊಳ್ಳಲಿರುವ ಕೆಲವು ಮುಖ್ಯ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ತಿಳಿಸಿದರು. ಹಾಗೂ ಈ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಲು ನಿಮ್ಮಗಳ ಸಹಕಾರ ಬಹಳ ಮುಖ್ಯ. ಆದ್ದರಿಂದ ಎಲ್ಲರು ನಮ್ಮ ಈ ಸೇವಾ ಕಾರ್ಯಗಳಿಗೆ ತಮ್ಮ ಕೈ ಜೋಡಿಸಬೇಕಾಗಿ ವಿನಂತಿಸಿಕೊಂಡರು.




ನಂತರ ನಮ್ಮ ಕ್ಲಬ್ಬಿನ ಈ ಸಾಲಿನ ಪ್ರಥಮ ಮಿಡ್‌ಟೌನ್ ನ್ಯೂಸ್ ಪತ್ರಿಕೆಯ ಬಿಡುಗಡೆಯ ಕಾರ್ಯಕ್ರಮವನ್ನು

- 2ನೇ ಪುಟಕ್ಕೆ

- 1ನೇ ಪುಟದಿಂದ

ವಲಯ 10ರ ಅಸಿಸ್ಟೆಂಟ್ ಗೌವರ್ನರ್ ರೊ. ನಾಗರಾಜ ಎಸ್.ಆರ್. ರವರು, ನೆರವೇರಿಸಿ ಮಾತನಾಡುತ್ತ, ಕ್ಲಬ್ಬಿನ ಎಲ್ಲಾ ಕಾರ್ಯಕ್ರಮಗಳು ಸುಸೂತ್ರವಾಗಿ ನೆರವೇರಲು ಅಧ್ಯಕ್ಷರ ಮತ್ತು ಕಾರ್ಯದರ್ಶಿಯವರ ಕುಟುಂಬವರ್ಗದವರ ಸಹಕಾರ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತದೆ ಹಾಗೂ ಮುಂದಿನ ದಿನಗಳಲ್ಲಿ ನಿಮ್ಮ ಎಲ್ಲಾ ಚಟುವಟಿಕೆಗಳಿಗೆ ನನ್ನ ಸಹಕಾರ ಇರುತ್ತದೆ ಎಂದು ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಮಾಜಿ ಅಧ್ಯಕ್ಷರಾದ ರೊ. ವೀಣಾ ಸುರೇಶ್ ಇವರು ತಮ್ಮ 50ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಸುಮಾರು










50,000 ರೂಗಳನ್ನು ಈ ಕೆಳಕಂಕಡ ಕೆಲವು ರೋಟರಿ ಯೋಜನೆಗಳಿಗೆ ನೀಡಿದರು. ಅದರಲ್ಲಿ ಮೊದಲಿಗೆ ವಿದ್ಯಾವರ್ಧಕ ಶಾಲೆಯ 8ನೇ ತರಗತಿ ವಿದ್ಯಾರ್ಥಿಗೆ 10,000/-ರೂಗಳು ದೇಣಿಗೆ, ಮಾಧವ ನೆಲೆಯ 28 ಮಕ್ಕಳಿಗೆ ಸ್ವೆಟರ್‌ಗಳು, ತಾಯಿ ಮನೆಗೆ 26 ಛತ್ರಿಗಳನ್ನು, ಗೋಪಾಳ ಜೀವನ ಸಂಜೆ ವೃದ್ಧಾಶ್ರಮಕ್ಕೆ 2 ಫ್ಯಾನ್ ಮತ್ತು 10 ಚೇರ್‌ಗಳನ್ನು ಹಾಗೂ ನಮ್ಮ ಕ್ಲಬ್ಬಿನ ಸದಸ್ಯರಿಗೆ ವಿವಿಧ ಬಗೆ ಸಸಿಗಳನ್ನು ಕೊಡುಗೆಯಾಗಿ ನೀಡಲಾಯಿತು.

ಪದಗ್ರಹಣ ಅಧಿಕಾರಿಗಳಾಗಿ ಆಗಮಿಸಿದ್ದ ಡಿಜಿಇ. ರೊ. ಪಾಲಾಕ್ಷೆ ಕೆ. ರವರು ಮಾತನಾಡುತ್ತಾ ರೋಟರಿ ಸಂಸ್ಥೆಯ ಧ್ಯೇಯ ಬಹಳ ಉತ್ತಮವಾದದ್ದು, ಈ ದಿಶೆಯಲ್ಲಿ ಪ್ರತಿಯೊಬ್ಬ ರೋಟರಿ ಸದಸ್ಯರೂ ತಮ್ಮನ್ನು ಸಮಾಜದೊಡನೆ ತೊಡಗಿಸಿಕೊಂಡು ಅನೇಕ ಶ್ರೇಷ್ಟ ಸೇವೆಯನ್ನು ನಡೆಸಿದ್ದಾರೆ. ಅದೇ ರೀತಿ 2024-25ರ ನೂತನ ಅಧ್ಯಕ್ಷ ಪದವಿ ಸ್ವೀಕರಿಸಿರುವ ರೊ. ಸುರೇಶ್‌ಕುಮಾರ್ ಡಿ. ಹಾಗೂ ಅವರ ತಂಡದವರು ಸಮಾಜಮುಖಿ ಸೇವೆಗಳನ್ನು ರೂಪಿಸಿ, ತಮ್ಮ ಅವಧಿಯಲ್ಲಿ ಯಶಸ್ಸನ್ನು ಗಳಿಸಲೆಂದು ಹಾರೈಸಿದರು.

ಕೊನೆಯಲ್ಲಿ ಸಂಪ್ರದಾಯದಂತೆ ಕಾರ್ಯದರ್ಶಿ ರೊ. ಫಹೀಂ ಹುಸೇನ್ ಇವರ ವಂದನಾರ್ಪಣೆ ಮುಖೇನ ಅಚ್ಚುಕಟ್ಟಾದ ಸ್ವಾಧಿಷ್ಟ ಭೋಜನದೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು. ಈ ಎಲ್ಲಾ ಕಾರ್ಯಕ್ರಮಗಳ ನಿರೂಪಣೆಯನ್ನು ಕ್ಲಬ್ಬಿನ ಹಿರಿಯ ಸದಸ್ಯರಾದ ರೊ. ಜಿ.ಎನ್.ಎನ್. ಮೂರ್ತಿ ಮತ್ತು ರೊ. ಸೌಭಾಗ್ಯ ಕಿರಣ್‌ರವರ ಅಚ್ಚುಕಟ್ಟಾಗಿ ನೆರವೇರಿಸಿದರು.




ದಿನಾಂಕ 10-7-2024ರಂದು ಹೊಳಲೂರಿನ ಮಾರುತಿ ಪದವಿ ಪೂರ್ವ ಕಾಲೇಜಿನಲ್ಲಿ ಸುಮಾರು 230 ಮಕ್ಕಳಿಗೆ ರಕ್ತ ಗುಂಪು ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ರೊ. ಫಹೀಮ್ ಹುಸೇನ್, ರೊ. ಡಾ. ಶ್ರೀಧರ್, ರೊ. ವೀಣಾ ಸುರೇಶ್ ಮತ್ತು ಆ್ಯನ್ ಹೀನಾ ಫಹೀಮ್ ಪಾಲ್ಗೊಂಡಿದ್ದರು.




**ROTARIAN BIRTHDAY** *Greetings to*

| | |
|---|---|
| Rtn. Veena Suresh | Jul-05 |
| Rtn. Murali M. | Jul-08 |
| Rtn. Rajesh S.V. | Jul-08 |



**MARRIAGE ANNIVERSARY** *Greetings to*

| | |
|---|---|
| Rtn. Satyanarayan Pabhu K. | Jul-08 |
| Ann. Varalskshmi | |
| Rtn. Rangarajan N.S. | Jul-09 |
| Ann. Annapoorna | |



**ANN BIRTHDAY** *Greetings to*

| | |
|---|---|
| Ann. Nethra Jayaprakash | Jul-08 |

Printed at : A.S.R. Offset Printers, #4, Dargah Complex, Tilak Nagar Main Road, SHIMOGA-577201, Ph : 278764